ತಾರೀಖು 23ನೇ ಡಿಸಂಬರ್ 1889.

ನಂ. 273.—ಬೆಂಗಳೂರಲ್ಲಿರುವ ಫಾರೆಸ್ಟ್ಸ್ ಸೂಪರ್‌ಟೆಂಡೆಂಟ್ ಮೆ|| ಜ. ಈ. ಯಂ. ರಸ್ಸೆಲ್ ಯವರಿಗೆ ಮೆಡಿಕಲ್ ಸರ್‌ಟಿಫಿಕೇಟ್ ಮೇಲೆ ಸ್ಯ 1889ನೇ ಇಸವಿ ಡಿಸಂಬರ್ 11ರ ಲಾಗಾಯತು ಒಂದು ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ಮೆ|| ರಸ್ಸೆಲ್‌ಯವರು ರಜಾದ ಮೇಲೆ ಯಿರುವ ಪರಿವಿಗೆ ಬೆಂಗಳೂರು ಸಬ್ ಅಸಿಸ್ಟೆಂಟ್ ಕಣ್ಣಿಸರ್‌ವೇಟರ್ ಮೆ|| ಯಸ್. ಬಾಪೂ ರಾಯರು ಬೆಂಗಳೂರು ಫಾರೆಸ್ಟ್ ಸೂಪರ್‌ಟೆಂಡೆಂಟ್ ಕೆಲಸವನ್ನ ಆಕ್ಟಿಂಗ್ ಪರೀಕ್ ನೋಡುವಂತೆ ವೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 275.—ಕೋಲಾರ ಡಿಸ್ಟ್ರಿಕ್ಟ್ ಪೊಲೀಸ್ ಸೂ|| ಮೆ|| ಸಿ. ರಾಘವಾಚಾರ್ಲು ಯವರು ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ವೊಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ. 276.—ಹಾಸನ ಡಿಸ್ಟ್ರಿಕ್ಟ್ ಪೊಲೀಸ್ ಅಸಿಸ್ಟೆಂಟ್ ಕಮ್ಮಿಷನರ್ ಮೆ|| ದಳವಾಯಿ ದೇವರಾಜೆ ಅರಸಿನವರಿಗೆ 1889ನೇ ಇಸವಿ ಫಿಬ್ರವರಿ 5ನೇ ಮಾರ್ತ್ತಂ 7140—71—200ನೇ ನಂಬರ್ ಪ್ರೊಸೀಡಿಂಗ್ಸಿನ ನಿಬಂಧನೆಗಳನುಸರಿಸಿ 12 ದಿವಸಗಳ ಕ್ವಾಜ್ಯುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 277.—ಸ್ಯ 1889ನೇ ಇಸವಿ ಜೂನ್ 13ನೇ ಮಾರ್ತ್ತಂ 291—92ನೇ ನಂಬರುಳ್ಳ ಪ್ರೊಸೀಡಿಂಗ್ಸಿನ 4ನೇ ಕಲಮನು ಸರಿಸಿ, ಮೈಸೂರು ರೆವಿನ್ಯೂ ಸರ್ವೆ ಅಸಿಸ್ಟೆಂಟ್ ಸೂ|| ಮೆ|| ಯಂ. ಯಸ್. ನಾರಾಯಣರಾಯರು ಸ್ಯ 1889ನೇ ಇಸವಿ ನವಂಬರ್ ಗುರ್ತ್ಯೇ ಲಾಗಾಯತು 2ನೇ ಗ್ರೇಡಿನಿಂದ 1ನೇ ಗ್ರೇಡಿಗೆ ಬಡ್ತಿ ಮಾಡಲ್ಪಟ್ಟಿರುತ್ತಾರೆ.

ತಾರೀಖು 24ನೇ ಡಿಸಂಬರ್ 1889.

ನಂ. 274.—ಚಿಕ್ಕಬಳ್ಳಾಪುರದ ಆಕ್ಟಿಂಗ್ ಮುನಸಿಫ್ ಲಕ್ಷ್ಮೀನಾರಣಪ್ಪನವರಿಗೆ ಸೆಕೆಂಡ್ ಕ್ಲಾಸ್ ಮಾಜಿಸ್ಟ್ರೇಟರ ವ 1859ನೇ ಇಸವಿಯ XIIIನೇ ನಂಬರ್‌ವುಳ್ಳ (ಕರಾರು ತಪ್ಪಿದ ಬಗ್ಗೆ ಉಂಟಾದ) ಆಕ್ಟ್‌ನುಸರಿಸಿ ಪೊಲೀಸ್ ಮಾಜಿಸ್ಟ್ರೇಟರ ಅಧಿಕಾರಗಳನ್ನು ಕೊಡೋಣವಾಗಿರುತ್ತದೆ.

ನಂ. 278.—ಕಡೂರು ಡಿಸ್ಟ್ರಿಕ್ಟ್ ಕೊಪ್ಪ ತಾಲ್ಲೂಕು ಅಮಲ್ದಾರ್ ಲಕ್ಷ್ಮಣರಾಯರಿಗೆ, ಸೆಕೆಂಡ್ ಕ್ಲಾಸ್ ಮಾಜಿಸ್ಟ್ರೇಟರ ವ 1859ನೇ ಇಸವಿಯ XIIIನೇ ನಂಬರುಳ್ಳ (ಕರಾರು ತಪ್ಪಿದ ಬಗ್ಗೆ ಉಂಟಾದ) ಆಕ್ಟ್‌ನುಸರಿಸಿ ಪೊಲೀಸ್ ಮಾಜಿಸ್ಟ್ರೇಟರ ಅಧಿಕಾರಗಳನ್ನು ಕೊಡೋಣವಾಗಿರುತ್ತದೆ.

ನಂ. 279.—ಮೈಸೂರು ಡಿಸ್ಟ್ರಿಕ್ಟ್ ಗುಂಡ್ಲುಪೇಟೆ ತಾಲ್ಲೂಕು ಅಮಲ್ದಾರ್ ಖಾದರ್ ಅಲ್ಲೀಯವರಿಗೆ 1889ನೇ ಇಸವಿ ಫಿಬ್ರವರಿ 5ನೇ ಮಾರ್ತ್ತಂ 7140—71—200ನೇ ನಂಬರ್ ಪ್ರೊಸೀಡಿಂಗ್ಸ್ ಅನುಸರಿಸಿ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 10 ದಿವಸಗಳ ಕ್ವಾಜ್ಯುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 280.—ಕೋಲಾರ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಸರ್ಜನ್ ಜಿ. ಜಿ. ನೊರೋಹಾ ಯವರಿಗೆ 1889ನೇ ಇಸವಿ ಅಕ್ಟೋಬರ್ 17ನೇ ಮಾರ್ತ್ತಂ 600ನೇ ನಂಬರುಳ್ಳ ಇಸ್ತಿಹಾರಿನಲ್ಲಿ ಕೊಡೋಣವಾಗಿದ್ದ 45 ದಿವಸಗಳ ಪ್ರಿವಿಲೀಜ್ ರಜಾಕ್ಕೆ ಜಾಸ್ತೀಯಾಗಿ ಇದರ ದೆಕೆಯಿಂದ 8 ದಿವಸಗಳ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು ತಾರೀಖು 8ನೇ ಜನವರಿ 1890.

ನಂ. 281.—ಪೊಲೀಸ್ ಸೂ|| ಮೆ|| ಶೆ. ರಾಘವಾಚಾರ್ಲು ಯವರು ಕೋಲಾರ ಡಿಸ್ಟ್ರಿಕ್ಟ್ ಪೊಲೀಸ್ ಆಫಿಸಿನ ಚಾರ್ಜನ್ನು 1889ನೇ ಇಸವಿ ಡಿಸಂಬರ್ ತಾರೀಖು 27ನೇ ಪ್ರಾತಃಕಾಲ ವಹಿಸಿಕೊಂಡಿರುತ್ತಾರೆ.

ಹುಕುಂ ಬಮೋಜೀಬ್,
ಯ್. ಕೃಷ್ಣರಾವ್
ಆ|| ಅಂಡರ್ ಸೆಕ್ರಟರಿ.

ವಿದ್ಯಾಭ್ಯಾಸದ ಇಲಾಖೆ.

7ನೇ ಮಾಹೆ ಜನವರಿ 1890ನೇ ಇಸವಿ.

ಮೈಸೂರು ದೇಶೀಯ ಪರೀಕ್ಷೆ.

ಸ್ಯ 1891ನೇ ಇಸವಿಯಲ್ಲಿ ನಡೆಯುವ ಮೈಸೂರು ದೇಶೀಯ ಪರೀಕ್ಷೆಗೋಸ್ಕರ ಇದರಿಂದ ನಮೂದಿಸಿರುವ ಭಾಷಾ ಗ್ರಂಥಗಳು ನಿರ್ಣಯಿಸಲ್ಪಟ್ಟಿರುತ್ತವೆ.

ಮೊದಲನೇ ಅಂದರೆ ಆವಶ್ಯಕಭಾಷೆ.

ವಿದ್ಯಾರ್ಥಿಗಳ ಪರೀಕ್ಷೆ.

ಕನ್ನಡ	ಪದ್ಯಸಾರ (7ನೇ ಆಥವಾ 8ನೇ ಭಾಗ)	ಪದ್ಯಗಳು 1–144, 302—362
	ಕಂಠಪಾಠ ..	72–101, 345—362
ತೆಲುಗು	ನಳಚರಿತ್ರಂ	
	ಕಂಠಪಾಠ ..	ಪುಟಗಳು 1—15
ಅರವ	2ನೇ ನಂಬರ್ ನೀತಿಮಂಜರಿ	
	ಕಂಠಪಾಠ ..	ಪುಟಗಳು 123—200
ಹಿಂದುಸ್ತಾನಿ	ಮಜಮು ಅಯಿಸುಲ್ಖ ಎರಡನೇ ಭಾಗ	ಪುಟಗಳು 1—32
	ಕಂಠಪಾಠ ..	ಪುಟಗಳು 1—16

ಎರಡನೇ ಅಂದರೆ ಐಚ್ಛಿಕ ಭಾಷೆ.

ಸಂಸ್ಕೃತ	ರಘುವಂಶ ಸರ್ಗಗಳು 2 ಮತ್ತು 3
ಫಾರಸಿ	ಗುಲಿಸ್ತಾ 3 ಮತ್ತು 8ನೇ ಅಧ್ಯಾಯಗಳು ಪ್ರಸ್ತಾವನೆಯೊಡನೆ
ಕನ್ನಡ	
ತೆಲುಗು	ಮೊದಲನೇ ಭಾಷೆಗೆ ನಿಷ್ಕರ್ಷೆ ಮಾಡಿರುವಂತೆ.
ಅರವ	
ಹಿಂದುಸ್ತಾನಿ	

ಉಪಾಧ್ಯಾಯರ ಪರೀಕ್ಷೆ

	ಭಾಷೆ.	
ಕನ್ನಡ	ರಾಜಕೇಖರ ಆಶ್ವಾಸಗಳು ..	1—5
	ಜೈಮಿನಿ ಭಾರತ ಸಂಧಿಗಳು ..	1—10
	ಮುದ್ರಾಮಂಜೂಷ ಪುಟಗಳು ..	1—121
ತೆಲುಗು	ಭಾರತಮು (ಸಭಾಪರ್ವಮು) ಪಂಚತಂತ್ರಮು	
ಅರವ	ಭಾರತವೆಣ್ಬಾ (ಅರಣ್ಯಪರ್ವಂ) ಪಂಚತಂತ್ರಂ	
ಹಿಂದುಸ್ತಾನಿ ಮತ್ತು ಫಾರಸಿ	ಜೋಸ್ತ್ರ್ ಆಧ್ಯಾಯಗಳು 6, 7, 9, ಮತ್ತು 10 ಪ್ರಸ್ತಾವನೆಯೊಡನೆ.	
	ನೈರಂಗೀಖಿಯಲ್ 1ನೇ ಭಾಗ (ಮಹಮ್ಮದ್‌ಹುಸೇನ್ ಅಜಾದ್‌ಖುವರಿಂದ ರಚಿಸಲ್ಪಟ್ಟದ್ದು.)	
	ಅನ್ವಾರಿಸುಹೇಲಿ ಆಧ್ಯಾಯಗಳು 9—14 ಪ್ರಸ್ತಾವನೆಯೊಡನೆ.	

ತಾರೀಖು 15ನೇ ಮಾಹೆ ಜನವರಿ 1890ನೇ ಇಸವಿ.

ಸ್ರ 1890ನೇ ಇಸವಿಯಲ್ಲಿ ನಡೆಯುವ ಮೈಸೂರು ದೇಶೀಯ ವಿದ್ಯಾರ್ಥಿಗಳ ಪರೀಕ್ಷೆಯಲ್ಲಿ ನೆಲವಂಗಲದ ತಾಲ್ಲೂಕು ತ್ಯಾಮಗೊಂಡ್ಲು ಕನ್ನಡ ತಾಲ್ಲೂಕು ಬ್ರಾಂಚ್ ಸ್ಕೂಲಿನಿಂದ ತೇರ್ಗಡೆ ಹೊಂದುವಂಥಾ ವಿದ್ಯಾರ್ಥಿಗಳಿಗೆ ಇದರಡೀ ಕಂಡಂತೆ ಬಹುಮಾನಗಳು ಕೊಡಲ್ಪಡುವವು:—

1.	ರಾಜಾಲಿಂಗಯ್ಯ ಶಟ್ಟಿ, ನೆಲವಂಗಲ ತಾಲ್ಲೂಕು ತ್ಯಾಮಗೊಂಡ್ಲು ವಾಸಸ್ಥ	ಗಣಿತದಲ್ಲಿ ಅಧಿಕವಾದ ನಂಬರುಗಳಿಗಾಗಿ	5 ರೂಪಾಯಿನ ವೆಂದು ಬೆಳ್ಳಿ ಬಟ್ಟು
2.	ಕಂಕರಪ್ಪ ಡಿಟೋ	ಡಿಟೋ	ಬಟ್ಟು ಸಂಖ್ಯೆಯಲ್ಲಿ ಅಧಿಕವಾದ ನಂಬರುಗಳಿಗಾಗಿ	ಗಣಿತಾರ್ನವ
3.	ಯಲ್. ವೆಂಕಟಸಾಮಿಶೆಟ್ಟಿ	ಡಿಟೋ	ಡಿಟೋ	ಭಾಷೆಯಲ್ಲಿ ಅಧಿಕ ನಂಬರುಗಳಿಗಾಗಿ ಮುಂಗಳೂರು ಭಾಷೆ ಶಬ್ದಮಣಿದರ್ಪಣ
4.	ಟಿ. ದೊಡ್ಡವೆಂಕಟಸಾಮಿ ಶೆಟ್ಟಿ,	ಡಿಟೋ	ಐಚ್ಛಿಕಾಂಕಗಳಲ್ಲಿ ಅಧಿಕ ನಂಬರುಗಳಿಗಾಗಿ	ಆರೋಗ್ಯಪ್ರವೇಕದಾಯಿನಿ ಮತ್ತು ಆರೋಗ್ಯಸೂತ್ರ ಸಂಗ್ರಹ

ತಾರೀಖು 16ನೇ ಮಾಹೆ ಜನವರಿ 1890ನೇ ಇಸವಿ.

ಸ್ರ 1890 ಮತ್ತು 1891ನೇ ಇಸವಿಗಳಲ್ಲಿ ನಡೆಯುವ ಮೈಸೂರು ದೇಶೀಯ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವಂಥಾವರಿಗೆ ಕೋಲಾರ ಡಿಸ್ಟ್ರಿಕ್ಟು ಡೆಪ್ಯೂಟಿ ಕಮಿಷ್ನರಾದ ಮೆ|| ಅಬ್ದುಲ್‌ರಹಿಮರ್ಖಾಯವರ ಮುಖಾಂತ್ರ ಇದರಡೀಕಂಡಂತೆ ಬಹುಮಾನಗಳು ಕೊಡಲ್ಪಡುವವು:—

ಉಪಾಧ್ಯಾಯರ ಪರೀಕ್ಷೆ.

ಹಿಂದುಸ್ತಾನಿಯೊಡನೆ ಫಾರಸಿ.

1.	ಸುಬೇದಾರ್ ಮೇಜರ್ ಅಬ್ದುಲ್‌ಖಾದರ್ ಸಾಹೇಬರವರ ಬಹುಮಾನ, ಭಾಷಾಗ್ರಂಥಗಳಲ್ಲಿಯು ಮತ್ತು ಇತರ ವಿಷಯಗಳಲ್ಲಿಯು ಅಧಿಕವಾದ ನಂಬರು ಪಡೆಯುವಂಥಾವನಿಗೆ	ರೂ. 15

ವಿದ್ಯಾರ್ಥಿಗಳ ಪರೀಕ್ಷೆ.

ಹಿಂದುಸ್ತಾನಿ.

2. ಸುಬೇದಾರ್ ಮೇಜರ್ ಸಫ಼ೀದರ್ ಅಲ್ಲೀ ಸಾಹೇಬಹದೂರವರ ಬಹುಮಾನ, ಕನ್ನಡವನ್ನು ಐಚ್ಛಿಕಾಂಶವಾಗಿ ತೆಗದುಕೊಂಡು ಅಧಿಕವಾದ ನಂಬರು ಪಡೆಯುವಂಥಾವನಿಗೆ .. .. } ರೂ. 10

3. ಗುಂಡ್ಲು ಪೇಟೆ ತಾಲ್ಲೂಕು ಅಮಲ್ದಾರ್ ಮಿರ್ಖಾದರ್ ಅಲ್ಲೀ ಸಾಹೇಬರವರ ಬಹುಮಾನ, ಭಾಷಾಗ್ರಂಥಗಳಲ್ಲಿಯು ಮತ್ತು ಇತರ ವಿಷಯಗಳಲ್ಲಿಯು ಅಧಿಕವಾದ ನಂಬರು ಪಡೆಯುವಂಥಾವನಿಗೆ. } ರೂ. 10

ಕನ್ನಡ.

4. ಅಮಲ್ದಾರ್ ಅಬ್ದುಲ್ ಸಮತ್ತ್ ಸಾಹೇಬರವರ ಬಹುಮಾನ, ಹಿಂದುಸ್ತಾನಿಯನ್ನು ಐಚ್ಛಿಕಾಂಶವಾಗಿ ತೆಗದುಕೊಂಡು ಅಧಿಕವಾದ ನಂಬರು ಪಡೆಯುವಂಥಾವನಿಗೆ .. } ರೂ. 10

5. ತುಂಕೂರು ತಾಲ್ಲೂಕು ಅಮಲ್ದಾರ್ ಅಬ್ದುಲ್ ಅಜೀಜ್ ಸಾಹೇಬರವರ ಬಹುಮಾನ, ಫಾರಸಿಯನ್ನು ಐಚ್ಛಿಕಾಂಶವಾಗಿ ತೆಗದುಕೊಂಡು ಅಧಿಕವಾದ ನಂಬರು ಪಡೆಯುವಂಥಾವನಿಗೆ .. } ರೂ. 10

ಎಲ್. ರೈಸ್,
ಎಡ್ಯುಕೇಷನ್ ಸೆಕ್ರಟರಿ.